## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದಲ್ಲಿ ಪ್ರತ್ಯೇಕವಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಸೃಜಿಸುವ ಬಗ್ಗೆ

ಓದಲಾಗಿದೆ:

ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರ ಪತ್ರ ಸಂಖ್ಯೆ:ಡಿಬಿಸಿಎಂ:ಸ-೪:ಸಿಆರ್-೩೫:೯೫-೯೬
ದಿನಾಂಕ:೬-೮-೧೯೯೮

::::

**ಪ್ರಸ್ತಾವನೆ:**

ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಬೆಳವಣಿಗೆಗಾಗಿ ಪ್ರತ್ಯೇಕವಾದ ನಿರ್ದೇಶನಾಲಯವನ್ನು ಸ್ಥಾಪಿಸಲು ೧೯೯೮-೯೯ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಹಿನ್ನಲೆಯಲ್ಲಿ ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರು ಮೇಲೆ ಓದಲಾದ ಪತ್ರದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯವನ್ನು ಸೃಜಿಸಲು ಮತ್ತು ಸದರಿ ಇಲಾಖೆಗೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಪ್ರಸ್ತಾಪಿಸಿರುತ್ತಾರೆ.

| | |
|---|---|
| ೧. ನಿರ್ದೇಶಕರು, ಭಾ.ಆ.ಸೇ. (ಹಿರಿಯ ಶ್ರೇಣಿ) | ೧ ಹುದ್ದೆ |
| ೨. ಜಂಟಿ ನಿರ್ದೇಶಕರು( ರೂ ೩೮೨೫-೫೮೨೫) | ೮ ಹುದ್ದೆ |
| ೩. ಉಪ ನಿರ್ದೇಶಕರು (ರೂ ೩೩೦೦-೫೩೦೦) | ೧ ಹುದ್ದೆ |
| ೪. ಸಹಾಯಕ ನಿರ್ದೇಶಕರು (ರೂ ೨೩೭೫-೪೪೫೦) | ೧ ಹುದ್ದೆ |
| ೫. ಲೆಕ್ಕ ಅಧೀಕ್ಷಕರು (ರೂ ೧೯೦೦-೩೭೦೦) | ೧ ಹುದ್ದೆ |
| ೬. ಕಛೇರಿ ಅಧೀಕ್ಷಕರು (ರೂ ೧೯೦೦-೩೭೦೦) | ೮ ಹುದ್ದೆಗಳು |
| ೭. ಪ್ರಥಮ ದರ್ಜೆ ಸಹಾಯಕ(ರೂ ೧೨೮೦-೨೩೭೫) | ೨ ಹುದ್ದೆಗಳು |
| ೮. ದ್ವಿತೀಯ ದರ್ಜೆ ಸಹಾಯಕ(ರೂ ೧೦೪೦-೧೯೦೦) | ೪ ಹುದ್ದೆಗಳು |
| ೯. ಶೀಘ್ರಲಿಪಿಗಾರರು (ರೂ ೧೨೮೦-೨೩೭೫) | ೨ ಹುದ್ದೆಗಳು |
| ೧೦. ಬೆರಳಚ್ಚುಗಾರರು (ರೂ ೧೦೪೦-೧೯೦೦) | ೩ ಹುದ್ದೆಗಳು |
| ೧೧. ಜವಾನರು (ರೂ ೮೪೦-೧೩೪೦) | ೨ ಹುದ್ದೆಗಳು |
| ೧೨. ವಾಹನ ಚಾಲಕರು (ರೂ ೧೦೪೦-೧೯೦೦) | ೨ ಹುದ್ದೆಗಳು |

ಅಲ್ಲದೆ ಈ ಹೊಸ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಗೂ ಈ ಕೆಳಕಂಡ ಹುದ್ದೆಯನ್ನು ಸಹ ಸೃಜಿಸಲು ನಿರ್ದೇಶಕರು ಪ್ರಸ್ತಾಪಿಸಿರುತ್ತಾರೆ.

| | |
|---|---|
| ೧. ಪ್ರಥಮ ದರ್ಜೆ ಸಹಾಯಕ(ರೂ ೧೨೮೦-೨೩೭೫) | ೧ ಹುದ್ದೆ |
| ೨. ದ್ವಿತೀಯ ದರ್ಜೆ ಸಹಾಯಕ (ರೂ ೧೦೪೦-೧೯೦೦) | ೧ ಹುದ್ದೆ |
| ೩. ಬೆರಳಚ್ಚುಗಾರರು ( ರೂ ೧೦೪೦-೧೯೦೦) | ೧ ಹುದ್ದೆ |
| ೪. ಗ್ರೂಪ್ 'ಡಿ' (ರೂ ೮೪೦-೧೩೪೦) | ೧ ಹುದ್ದೆ |

ಕಾರಣ ಈ ಆದೇಶ

**ಸರ್ಕಾರಿ ಆದೇಶ ಸಂಖ್ಯೆ ಸಕಇ ೧೧೪ ಬಿಇಬಿ ೯೮, ಬೆಂಗಳೂರು ದಿನಾಂಕ:೯-೧೨-೧೯೯೮**

ನಿರ್ದೇಶಕರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ರಾಜ್ಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪ್ರತ್ಯೇಕವಾಗಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯವನ್ನು ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ. ಈ ಹೊಸ ಇಲಾಖೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ.

| | |
|---|---|
| ೧. ನಿರ್ದೇಶಕರು, ಭಾ.ಆ.ಸೇ. (ಹಿರಿಯ ಶ್ರೇಣಿ) | ೧ ಹುದ್ದೆ ✓ |
| ೨. ಜಂಟಿ ನಿರ್ದೇಶಕರು, (ರೂ ೩೮೨೫-೫೮೨೫) | ೧ ಹುದ್ದೆ ✓ |
| ೩. ಸಹಾಯಕ ನಿರ್ದೇಶಕರು(ರೂ ೨೩೭೫-೪೪೫೦) | ೧ ಹುದ್ದೆ ✓ |
| ೪. ಪ್ರಥಮ ದರ್ಜೆ ಸಹಾಯಕರು (ರೂ ೧೨೮೦-೨೩೭೫) | ೧ ಹುದ್ದೆ |
| ೫. ದ್ವಿತೀಯ ದರ್ಜೆ ಸಹಾಯಕರು (ರೂ ೧೦೪೦-೧೯೦೦) | ೧ ಹುದ್ದೆ |
| ೬. ಶೀಘ್ರಲಿಪಿಗಾರರು (ರೂ ೧೨೮೦-೨೩೭೫) | ೧ ಹುದ್ದೆ |
| ೭. ಬೆರಳಚ್ಚುಗಾರರು (ರೂ ೧೦೪೦-೧೯೦೦) | ೧ ಹುದ್ದೆ |
| ೮. ಗ್ರೂಪ್ - ಡಿ (ರೂ ೮೦೦-೧೩೪೦) | ೧ ಹುದ್ದೆ |
| ೯. ವಾಹನ ಚಾಲಕರು (ರೂ ೧೦೪೦-೧೯೦೦) | ೧ ಹುದ್ದೆ |

ಈ ಮೇಲಿನ ಹುದ್ದೆಗಳನ್ನು ನಿಯೋಜನೆ ಮೇಲೆ ಭರ್ತಿ ಮಾಡಲು ಸೂಚಿಸಿದೆ.

೨. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಯನ್ನು 'ಹಿಂದುಳಿದ ವರ್ಗಗಳ ಇಲಾಖೆ' ಎಂದು ಮರು ನಾಮಕರಣ ಮಾಡಲಾಗಿದೆ.

೩. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರಿಗೆ ಸೂಚಿಸಿದೆ.

೧. ಹಾಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶನಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರನ್ನು ಹೊಸದಾಗಿ ಸ್ಥಾಪಿಸಲಾಗಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ವರ್ಗಾಯಿಸುವ ಬಗ್ಗೆ

೨. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಕಛೇರಿಗಳಿಂದ ನೌಕರರನ್ನು ಈ ಹೊಸ ಇಲಾಖೆಗೆ ವರ್ಗಾಯಿಸುವ ಬಗ್ಗೆ ಮತ್ತು ಇವರ ಮೇಲ್ವಿಚಾರಣೆ ಬಗ್ಗೆ

೩. ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರಿಗೆ ವಿವಿಧ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಈ ಹೊಸ ಇಲಾಖೆಗೆ ವರ್ಗಾಯಿಸುವ ಬಗ್ಗೆ

೪. ಹೊಸದಾಗಿ ಸ್ಥಾಪಿಸಿರುವ ನಿರ್ದೇಶನಾಲಯದ ನಿರ್ವಹಣೆಗೆ ಅಗತ್ಯವಿರುವ ಮೊತ್ತದ ಬಗ್ಗೆ

೪. ಈ ಆದೇಶವನ್ನು ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ ೧೦೦೮ ವೆಚ್ಚ-೩:೯೮ ದಿನಾಂಕ:೧೭:೧೮-೧೧-೯೮ರಲ್ಲಿ ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಯೋಇ ೨೩೭೦-ಎಫ ದಿನಾಂಕ:೨೩-೧೧-೯೮ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ:
(ನ.ಲ.ನರಸಿಂಹನ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

"ನಕಲು ಪ್ರತಿ ::

ನಿರ್ದೇಶಕರ ಪರವಾಗಿ,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.